**ಸರ್ಕಾರಿ ಪ್ರೌಢಶಾಲೆ, ಹನುಮಿಡಿ ತಾ:ಬೇಲೂರು ಜಿಲ್ಲೆ:ಹಾಸನ**

## 2024-25

# ಶಾಲಾ ಯಶೋಗಾಥೆ

"ದೇಶದ ಭವಿಷ್ಯವು ತರಗತಿಯ ನಾಲ್ಕು ಗೋಡೆಗಳ ನಡುವೆ ನಿರ್ಮಾಣವಾಗುತ್ತದೆ". ಹೌದು, ಒಂದು ದೇಶದ ಭವಿಷ್ಯವು ಅದರ ಮಕ್ಕಳು ಪಡೆಯುವ ಶಿಕ್ಷಣದ ಮೇಲೆನಿಂತಿದೆ. ಸದೃಢ ದೇಶದ ನಿರ್ಮಾತೃಗಳನ್ನು ರೂಪಿಸುವ ಪವಿತ್ರಕಾರ್ಯವನ್ನು ಶಾಲೆಗಳು ನಿರಂತರವಾಗಿ ಮಾಡುತ್ತಾಬಂದಿವೆ. ಅದರಲ್ಲೂ ಈ ಕೈಂಕರ್ಯದಲ್ಲಿ ಸರ್ಕಾರಿ ಶಾಲೆಗಳ ಪಾತ್ರ ಅನನ್ಯವಾದದು. ಈ ದೇಶದ ಭವ್ಯ ಪರಂಪರೆಯ ಶಿಲ್ಪಿಗಳೆಂದು ಹೆಸರಿಸಬಹುದಾದ ಅಸಂಖ್ಯ ಮಹಾಪುರುಷರು ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿರುವುದು ಸರ್ಕಾರಿ ಶಾಲೆಗಳಲ್ಲಿಯೇ. ಸರ್ಕಾರಿ ಶಾಲೆಗಳು ನೀಡುವ ವೈವಿಧ್ಯಮಯ ಶಿಕ್ಷಣದ ಅನುಭವಗಳೇ ನಮ್ಮ ಬದುಕನ್ನು ರೂಪಿಸುವ ಮೂಲಾಂಶಗಳು.

ಇಂತಹ ಸರಕಾರಿ ಶಾಲೆಗಳು ಆಧುನಿಕತೆಯ ಹೊಡೆತಕ್ಕೆ ಸಿಲುಕಿ ತಮ್ಮ ಗತವೈಭವವನ್ನು ಕಳೆದುಕೊಳ್ಳುತ್ತಿರುವ ಸಂಕಷ್ಟದ ಕಾಲಘಟ್ಟದಲ್ಲಿ ಇಂದು ನಾವಿದ್ದೇವೆ. ಆಧುನಿಕತೆಯ ಭರಾಟೆಯ ನಡುವೆ ಕಾನ್ವೆಂಟುಗಳ ಮೋಹಕ್ಕೆ ಸಿಲುಕಿ ಮಕ್ಕಳು ಸರಕಾರಿ ಶಾಲೆಗಳಿಂದ ದೂರವಾಗುತ್ತಿರುವಂತಹ ಈ ಕಾಲಘಟ್ಟದಲ್ಲಿ ಕೆಲವು ಸರಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ನಾವೇನು ಕಡಿಮೆ ಇಲ್ಲ ಎಂಬಂತೆ ಹೆಚ್ಚು ಹೆಚ್ಚು ಮಕ್ಕಳನ್ನು ತಮ್ಮತ್ತ ಸೆಳೆದು ಅತ್ಯಂತ ಗುಣಾತ್ಮಕ ಫಲಿತಾಂಶ ಹಾಗೂ ಕ್ರಿಯಾಶೀಲ ಕಾರ್ಯಚಟುವಟಿಕೆಗಳ ಮೂಲಕ ಶಿಕ್ಷಣದಲ್ಲಿ ತಮ್ಮದೇ ಛಾಪನ್ನು ಮೂಡಿಸಿವೆ. ಅಂತಹ ಶಾಲೆಗಳ ಪಟ್ಟಿಯಲ್ಲಿ ನಿಲ್ಲುವ ಒಂದು ಶಾಲೆ ಹಾಸನ ಜಿಲ್ಲೆ ಬೇಲೂರು ತಾಲೂಕಿನ ಹಲ್ಮಿಡಿ ಗ್ರಾಮದ ಸರಕಾರಿ ಪ್ರೌಢಶಾಲೆ.

## <u>ಈ ಶಾಲೆಯ ಒಂದು ಪರಿಚಯ ವರದಿ</u>

### "ಶಾಲಾ ಧ್ಯೇಯ ವಾಕ್ಯ"

***"ಸತ್ವಯುತಜೀವನಕ್ಕಾಗಿಮೌಲ್ಯಯುತಶಿಕ್ಷಣ"***

# ಶಿಕ್ಷಕರತಂಡ




# ಶಾಲಾ SDMC



**ಶಾಲೆಯಲ್ಲಿ ನಾಗೇಶ್ ಹೆಚ್. ಎಸ್. ಅಧ್ಯಕ್ಷತೆಯಲ್ಲಿ ಅತ್ಯಂತ ಕ್ರಿಯಾಶೀಲ ಎಸ್ಡಿಎಂಸಿ ಸಮಿತಿ ಇದ್ದು ಎಲ್ಲ ಕೆಲಸಗಳಲ್ಲಿ ಬೆಂಬಲವಾಗಿ ನಿಲ್ಲುತ್ತದೆ**

## ಶಾಲಾ ಮೈದಾನ ಮತ್ತು ಕಟ್ಟಡ







**ಸುಮಾರು ಎರಡು ಎಕರೆ ಜಾಗದಲ್ಲಿ ವಿಶಾಲವಾದ ಆಟದ ಮೈದಾನ ಹಾಗೂ ಸುಸಜ್ಜಿತ ಕಟ್ಟಡವನ್ನು ಈ ಶಾಲೆಹೊಂದಿದ್ದು ಒಟ್ಟಾರೆ 7 ಕೊಠಡಿಗಳಿವೆ. ಅದರಲ್ಲಿ ವಿವೇಕ ಶಾಲಾಯೋಜನೆಯಡಿ 2023-24 ನೇಸಾಲಿನಲ್ಲಿ ನಿರ್ಮಾಣವಾದ ಸುಸಜ್ಜಿತವಾದ ತರಗತಿ ಕೊಠಡಿಯೂ ಸೇರಿದೆ. ಶಾಲಾ ಮೈದಾನಕ್ಕೆ ಕಾಂಪೌಂಡ್ ವ್ಯವಸ್ಥೆ ಸಹ ಇದ್ದು ಸಂಪೂರ್ಣ ರಕ್ಷಣೆ ಹೊಂದಿದೆ.**

## :ಶಾಲೆಯ ಹಿನ್ನೆಲೆ :

**1962 ರಲ್ಲಿ ಬೆಣ್ಣೂರು ಗ್ರಾಮದಲ್ಲಿ ಆರಂಭವಾದ ಈ ಪ್ರೌಢಶಾಲೆಯು ಈ ಭಾಗದ ಸುತ್ತಮುತ್ತಲಿನ ಹತ್ತಾರು ಗ್ರಾಮಗಳ ವಿದ್ಯಾರ್ಥಿಗಳ ಜ್ಞಾನದಾಹವನ್ನು ನಿರಂತರವಾಗಿ ತಣಿಸುತ್ತಾಬಂದಿದೆ. ಈ ಶಾಲೆಗೆ ಈಗ 62ರ ಹರೆಯ. 60ಕ್ಕೂ ಹೆಚ್ಚಿನ ವರ್ಷಗಳ ಕಾಲ ಶೀಲ, ಸಂಸ್ಕಾರ, ಚಾರಿತ್ರ್ಯವಂತ ನವಪೀಳಿಗೆಯನ್ನು ಸಮಾಜಕ್ಕೆ ಅರ್ಪಿಸುತ್ತಾ ಬಂದಿರುವ ಈ ಶಾಲೆಯಲ್ಲಿ ಕಲಿತ ಸಾವಿರಾರು ವಿದ್ಯಾರ್ಥಿಗಳು ಸಮಾಜದ ವಿವಿಧ ಸ್ಥಳಗಳಲ್ಲಿ ಬದುಕನ್ನು ರೂಡಿಸಿಕೊಂಡು ಸಮಾಜಕ್ಕೆ ಆಸ್ತಿಯಾಗಿದ್ದಾರೆ. 1962 ರಿಂದ 2003ರ ವರೆಗೆ ಬೆಣ್ಣೂರು ಗ್ರಾಮದಲ್ಲಿ ನಡೆಯುತ್ತಿದ್ದ ಈ ಶಾಲೆಯು ಯಗಚಿ ಜಲಾಶಯದ ನಿರ್ಮಾಣದ ಕಾರಣದಿಂದಾಗಿ ಹನುಮಿಡಿ ಗ್ರಾಮಕ್ಕೆ ಸ್ಥಳಾಂತರಗೊಂಡಿತು. ರುದ್ರೇಗೌಡ ಮಂಜೇಗೌಡ ಎಂಬ ಹನುಮಿಡಿ ಗ್ರಾಮದ**

ದಾನಿಗಳು ದಾನವಾಗಿ ನೀಡಿದ ಎರಡು ಎಕರೆ ಜಮೀನಿನಲ್ಲಿ ಶಾಲೆಯ ಕಟ್ಟಡ ನಿರ್ಮಾಣಗೊಂಡು ಶಾಲೆ ಆರಂಭಗೊಂಡಿತು. ಪ್ರಸ್ತುತ ಒಂದೇ ಶಾಲಾಸಂಕೀರ್ಣದಲ್ಲಿ ಪ್ರೌಢಶಾಲಾ ಮತ್ತು ಉನ್ನತೀಕರಿಸಿದ ಹಿರಿಯ ಮಾಧ್ಯಮಿಕ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು ಪ್ರಾಥಮಿಕ ವಿಭಾಗದಲ್ಲಿ 170 ಪ್ರೌಢಶಾಲಾ ವಿಭಾಗದಲ್ಲಿ 120 ಮಕ್ಕಳನ್ನು ಒಳಗೊಂಡಂತೆ 295 ವಿದ್ಯಾರ್ಥಿಗಳು ಒಂದೇ ಸೂರಿನಡಿ ವಿದ್ಯಾಭ್ಯಾಸಮಾಡುತ್ತಿದ್ದಾರೆ.

# :ಹಲ್ಮಿಡಿಗ್ರಾಮದಕಿರುಪರಿಚಯ:

ಹಲ್ಮಿಡಿಎಂಬಈಹೆಸರೇಒಂದುಪುಳಕ.ಕನ್ನಡಸಾರಸ್ವತಲೋಕದಲ್ಲಿಈಗ್ರಾಮಕ್ಕೆ ಒಂದುವಿಶಿಷ್ಟವಾದಸ್ಥಾನ .ಕನ್ನಡದಅತ್ಯಂತಪ್ರಾಚೀನಶಿಲಾಶಾಸನದೊರೆತಗ್ರಾಮವೆಂಬಹೆಗ್ಗಳಿಕೆಇದರದ್ದು.ಇಂತಹಐತಿಹಾಸಿಕಮಹತ್ವವುಳ್ಳಗ್ರಾಮದಲ್ಲಿರುವಸರಕಾರಿಪ್ರೌಢಶಾಲೆಯುವೈವಿಧ್ಯಮಯ ಶೈಕ್ಷಣಿಕಚಟುವಟಿಕೆಗಳುಗುಣಾತ್ಮಕಶಿಕ್ಷಣದ ಜೊತೆಗೆಬಹಳಷ್ಟುಮೊದಲುಗಳನ್ನುತನ್ನಲ್ಲಿಹುದಗಿಸಿಕೊಂಡುಇಡೀಜಿಲ್ಲೆಯಲ್ಲಿಯೇ ಒಂದುಮಾದರಿಶಾಲೆಎಂಬಹೆಗ್ಗಳಿಕೆಗೆಪಾತ್ರವಾಗಿದೆ .ಭೌಗೋಳಿಕವಾಗಿಹಲ್ಮಿಡಿಶಾಲೆಯುಹಾಸನಜಿಲ್ಲೆಯಗಡಿಭಾಗದಕೊನೆಯಗ್ರಾಮ .ಹಾಸನದಿಂದಸುಮಾರು 60 ಕಿಲೋಮೀಟರ್ದೂರದಲ್ಲಿಯೂಹಾಗೂತಾಲೂಕುಕೇಂದ್ರಬೇಲೂರಿನಿಂದ 20 ಕಿಲೋಮೀಟರ್ದೂರದಲ್ಲಿಯೂಇದೆ .ಇನ್ನೊಂದುಜಿಲ್ಲಾಕೇಂದ್ರವಾದಚಿಕ್ಕಮಗಳೂರಿನಿಂದಕೇವಲ 10 ಕಿ.ಮೀದೂರದಲ್ಲಿರುವಈಶಾಲೆಯನ್ನುತಲುಪಬೇಕಾದರೆಬೇಲೂರಿನಿಂದಚಿಕ್ಕಮಗಳೂರುಮಾರ್ಗದಲ್ಲಿಸುಮಾರು 13 ಕಿಲೋಮೀಟರ್ಚಲಿಸಿಅಲ್ಲಿಂದ 6ಕಿಮೀಲೋಮೀಟರ್ಒಳಗೆಚಲಿಸಬೇಕು.ಸುಂದರಪ್ರಕೃತಿಸೌಂದರ್ಯದಖನಿಯಾಗಿರುವಈಭೂಭಾಗವುತರಕಾರಿಬೆಳೆಗಳನ್ನುಬೆಳೆಯುವುದರಲ್ಲಿಪ್ರಸಿದ್ದ.ಗ್ರಾಮದಮಧ್ಯಭಾಗದಲ್ಲಿಹಲ್ಮಿಡಿಶಾಸನದತದ್ರೂಪುಪ್ರತಿಯನ್ನುಪ್ರತಿಷ್ಠಾಪಿಸಲಾಗಿದ್ದುಶಾಸನದಮೂಲ ಪ್ರತಿಯನ್ನುಬೆಂಗಳೂರಿನಭಾರತೀಯಪುರಾತತ್ವಇಲಾಖೆಯಲ್ಲಿಸಂರಕ್ಷಿಸಲಾಗಿದೆ. ಕ್ರಿಸ್ತಶಕ 450 ರಲ್ಲಿಕದಂಬರಾಜಕಾಕುಸ್ಥವರ್ಮನುಬರೆಯಿಸಿದಶಿಲಾಶಾಸನಇದಾಗಿದ್ದುಹಳಗನ್ನಡ ಮತ್ತುಬ್ರಾಹ್ಮಿಲಿಪಿಯಪದಗಳಿಂದಕೂಡಿದ 16 ಸಾಲುಗಳನ್ನುಹೊಂದಿದೆ.ಯುದ್ದದಲ್ಲಿಜಯಗಳಿಸಿದ್ದಕ್ಕಾಗಿತನ್ನಸೈನಿಕವಿಜಯರಸ ಎಂಬುವನಿಗೆದತ್ತಿಯರೂಪದಲ್ಲಿಪನ್ನಿಡಿಮತ್ತುಮಾಳವಳ್ಳಿಎಂಬಎರಡುಗ್ರಾಮಗಳನ್ನುಉಡುಗೊರೆಯಾಗಿನೀಡಿದಬಗ್ಗೆಈಶಾಸನದಲ್ಲಿಉಲ್ಲೇಖವಿದೆ.ಇಂತಹಒಂದುಪ್ರಖ್ಯಾತಿಯನ್ನುಹೊಂದಿದಗ್ರಾಮದಲ್ಲಿರುವಸರ್ಕಾರಿಪ್ರೌಢಶಾಲೆಯುಈಭಾಗದಸಾವಿರಾರುವಿದ್ಯಾರ್ಥಿಗಳಿಗೆಗುಣಾತ್ಮಕವಾದಶಿಕ್ಷಣವನ್ನುನೀಡುವುದಮೂಲಕಈಭಾಗದಜನರ ಜ್ಞಾನದಕೇಂದ್ರವಾಗಿಕೆಲಸಮಾಡುತ್ತಿದೆ..

# ಭೌತಿಕ ಸೌಲಭ್ಯಗಳು :

## ಹೈಟೆಕ್ ಶೌಚಾಲಯ ವ್ಯವಸ್ಥೆ:

**ಶಾಲೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಹೈಟೆಕ್ ಶೌಚಾಲಯಗಳಿದ್ದು,ಶಾಲೆಗೆಪ್ರತ್ಯೇಕಕೊಳವೆಬಾವಿವ್ಯವಸ್ಥೆಯೂಸಹಲಭ್ಯವಿದೆ. ಕುಡಿಯಲುಹಾಗೂಶೌಚಾಲಯಬಳಕೆಗೆಅಗತ್ಯವಾದನೀರಿಗೆಯಾವುದೇಕೊರತೆಇರುವುದಿಲ್ಲ.**




## : ಶುದ್ಧ ಕುಡಿಯುವ ನೀರಿನ ವ್ಯವಸ್ಥೆ :

**ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಶದ್ಧ ಕುಡಿಯುವ ನೀರಿಗಾಗಿತಾಲ್ಲೂಕುಪಂಚಾಯಿತಿಅನುದಾನದಲ್ಲಿಸುಮಾರು 40000/- ವೆಚ್ಚದಲ್ಲಿಫಿಲ್ಟರ್ ವ್ಯವಸ್ಥೆ ಮಾಡಲಾಗಿದೆ ಹಾಗೂ ಕೈ ತೊಳೆಯುವ ವ್ಯವಸ್ಥೆಗಾಗಿ ಅಗತ್ಯ ನಲ್ಲಿಗಳನ್ನು ಹಾಕಿಸಲಾಗಿದೆ.**

## ತರಗತಿವಾರು ವಿದ್ಯಾರ್ಥಿಗಳದಾಖಲಾತಿ:

| ಕ್ರ. ಸಂ | ತರಗತಿವಾರು ವಿದ್ಯಾರ್ಥಿಗಳ ಸಂಖ್ಯೆ | | | |
|---|---|---|---|---|
| | 8 | 9 | 10 | ಒಟ್ಟು |
| 1 | 38 | 40 | 41 | 119 |

# :SSLCಫಲಿತಾಂಶ ವಿಶ್ಲೇಷಣೆ :

## ಸರ್ಕಾರಿಪ್ರೌಢಶಾಲೆ – ಹನುಮಿಡಿ ,ಬೇಲೂರುತಾಲ್ಲೂಕುಹಾಸನಜಿಲ್ಲೆ

## ಕಳೆದ 5 ವರ್ಷಗಳಎಸ್ಎಸ್ಎಲ್ಸಿಫಲಿತಾಂಶವಿವರ




| ಕ್ರ.ಸಂ | ವರ್ಷ | ಶೇಕಡಾಫಲಿತಾಂಶ | ಗರಿಷ್ಠಅಂಕಗಳು | ತಾಲ್ಲೂಕುಸ್ಥಾನ |
|---|---|---|---|---|
| 1 | 2019–20 | 82.14% | 506 | ---- |
| 2 | 2020–21 | 100% | 585 | ತಾಲ್ಲೂಕುದ್ವಿತೀಯ |
| 3 | 2021–22 | 96.6% | 615 | ತಾಲ್ಲೂಕುಪ್ರಥಮ |
| 4 | 2022–23 | 100% | 601 | ತಾಲ್ಲೂಕುಪ್ರಥಮ |
| 5 | 2023–24 | 100% | 573 | -------- |

**ಎಸ್ಎಸ್ಎಲ್ಸಿಫಲಿತಂಶದಲ್ಲಿಶಾಲೆಯುಗಮನಾರ್ಹನಿರ್ವಹಣೆಯನ್ನುತೋರಿದ್ದುಸತತವಾಗಿಶೇ 100 ಫಲಿತಾಂಶವನ್ನುಪಡೆವಮೂಲಕಬೇಲೂರುತಾಲ್ಲೂಕಿನಲ್ಲಿಯೇಅತ್ಯಂತಗೂಣಾತ್ಮಕಫಲಿತಾಂಶವನ್ನುನೀಡುವಶಾಲೆಎಂಬಕೀರ್ತಿಗೆಪಾತ್ರವಾಗಿದೆ. ಅತಿಹೆಚ್ಚುಅಂಕಗಳಿಗೆಸರ್ಕಾರದಿಂದಕೊಡಮಾಡುವಲ್ಯಾಪ್ಟಾಪ್ಅನ್ನುಸತತ 3 ವರ್ಷಗಳಿಂದಪಡೆದಹೆಮ್ಮೆ ಈ ಶಾಲೆಗಿದೆ. 2021-22 ಹಾಗೂ22-23 ನೇಸಾಲಿನಲ್ಲಿಶಾಲೆಯವಿದ್ಯಾರ್ಥಿಗಳಾದರೋಹಿಣಿಬಿ ಈ (615 ಅಂಕ) ಹಾಗೂಸಿಂಚನ(601 ಅಂಕ) ಸರ್ಕಾರಿಶಾಲೆಗಳಪೈಕಿಅತೀಹೆಚ್ಚುಅಂಕಗಳನ್ನುಗಳಿಸಿದಕೀರ್ತಿಗೆಭಾಜನರಾಗಿಶಾಲೆಗೆಕೀರ್ತಿತಂದಿದ್ದಾರೆ.**

# :NMMSಫಲಿತಾಂಶದಲ್ಲಿಶಾಲೆಯಸಾಧನೆ:

ಕೇಂದ್ರಸರ್ಕಾರದವಿದ್ಯಾರ್ಥಿವೇತನಪರೀಕ್ಷೆಯಾದNMMSಪರೀಕ್ಷೆಯಲ್ಲಿಕಳೆದ 5 ವರ್ಷಗಳಲ್ಲಿಶಾಲೆಯಸಾಧನೆಹುಬ್ಬೇರಿಸುವಂತದ್ದು.ಸತತವಾಗಿ 4 ವರ್ಷಗಳಿಂದಜಿಲ್ಲಾಮಟ್ಟದಲ್ಲಿಹಾಗೂತಾಲ್ಲೂಕುಮಟ್ಟದಲ್ಲಿ ಅತಿಹೆಚ್ಚುವಿದ್ಯಾರ್ಥಿಗಳುಉತ್ತೀರ್ಣರಾದಶ್ರೇಯಕ್ಕೆಶಾಲೆಯಮಕ್ಕಳುಪಾತ್ರರಾಗಿದ್ದಾರೆ.ಈ ಮಕ್ಕಳುವಾರ್ಷಿಕ 12000 ರೂಗಳಂತೆ 4 ವರ್ಷಗಳಿಗೆ 48000 ವಿದ್ಯಾರ್ಥಿವೇತನವನ್ನುಪಡೆಯಲಿದ್ದಾರೆ.

ಇಲ್ಲಿಯಗಣಿತಶಿಕ್ಷಕರಾದನವೀನ್ಕುಮಾರಇವರಮಾರ್ಗದರ್ಶನದಲ್ಲಿ ಇತರೆಎಲ್ಲಶಿಕ್ಷಕರಸಹಕಾರದಿಂದ 5 ವರ್ಷಗಳಲ್ಲಿದಾಖಲೆಯ 43 ವಿದ್ಯಾರ್ಥಿಗಳುಆಯ್ಕೆಯಾಗಿದ್ದುಸರ್ಕಾರಿಪ್ರೌಢಶಾಲೆಗಳಪೈಕಿಇದುದಾಖಲೆಯೇಸರಿ.






ಪ್ರೌಢಶಾಲೆ 'ಪ್ರಥಮ'

ಬೇಲೂರು: ಇತ್ತೀಚಿಗೆ ಪ್ರಕಟವಾದ ಎನ್.ಎಂ.ಎಂ.ಎಸ್ ಪರೀಕ್ಷಾ ಫಲಿತಾಂಶದಲ್ಲಿ ಬೇಲೂರು ತಾಲ್ಲೂಕಿನ ಹಲ್ಮಿಡಿ ಸರ್ಕಾರಿ ಪ್ರೌಢಶಾಲೆಯ 16 ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಸತತ ಮೂರನೇ ಬಾರಿಗೆ ತಾಲೂಕಿನಲ್ಲಿ ಅತಿ ಹೆಚ್ಚು ಫಲಿತಾಂಶ ಪಡೆದ ಶ್ರೇಯಸ್ಸಿಗೆ ಪಾತ್ರವಾಗಿದೆ.

ಬೇಲೂರು ತಾಲೂಕಿನಲ್ಲಿ ಒಟ್ಟು 28 ವಿದ್ಯಾರ್ಥಿಗಳು ಆಯ್ಕೆಯಾಗಿರುತ್ತಾರೆ. ಇದೊಂದು ವಿದ್ಯಾರ್ಥಿ ವೇತನದ ಪರೀಕ್ಷೆಯಾಗಿದ್ದು, ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಯ ಎಂಟನೇ ತರಗತಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ವಾರ್ಷಿಕ 12000 ಗಳಂತೆ ಮುಂದಿನ ನಾಲ್ಕು ವರ್ಷಗಳಿಗೆ ಒಟ್ಟು 48000 ರೂ. ವಿದ್ಯಾರ್ಥಿ ವೇತನವನ್ನು ಕೇಂದ್ರ ಸರ್ಕಾರದ ವತಿಯಿಂದ ನೀಡಲಾಗುತ್ತದೆ.

ಆಯ್ಕೆಯಾದ ವಿದ್ಯಾರ್ಥಿಗಳು ಯೋಗಾನಂದ, ರೂಪ, ಕವನ, ಸಂಜಯ್, ವಿನಯ್ ಗೌಡ, ಚೇತನ್, ಯಶಸ್ವಿನಿ ಹೆಚ್ ಎಲ್, ಯಶಸ್ವಿನಿ ಹೆಚ್‌ಪಿ, ದಿವ್ಯ,ಜ್ಞಾನೇಶ್ವರಿ, ಭರತ್ ಕುಮಾರ್, ಯಶ್ವಂತ್, ಸಹನ, ಲಾವಣ್ಯ,ಐಶ್ವರ್ಯಹಾಗೂ ಮಾನ್ಯ. ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆಯ ದತ್ತು ಪಡೆದ ಅಧಿಕಾರಿಗಳಾದ ತಾಲೂಕು ತಹಶೀಲ್ದಾರ್ ಮಮತಾ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ನಾರಾಯಣ್ ಹರ್ಷ ವ್ಯಕ್ತಪಡಿಸಿದ್ದು, ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

ಗುಣಾತ್ಮಕ ಶಿಕ್ಷಣದ ಮೂಲಕ ಇತ್ತೀಚಿನ ವರ್ಷಗಳಲ್ಲಿ ತಾಲೂಕಿನ ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ


ಕರ್ನಾಟಕ ಸರ್ಕಾರ

ಸರ್ಕಾರಿ ಪ್ರೌಢ ಶಾಲೆ, ಹನುಮಿಡಿ, ಬೇಲೂರು.ತಾ।

N.M.M.S. ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ವಿವರ.

| ಕ್ರ.ಸಂ | ವರ್ಷ | ವಿದ್ಯಾರ್ಥಿಗಳ ಹೆಸರು | ಸ್ಥಾನ |
|---|---|---|---|
| 1 | 2019-20 | ಬಿಂದು.B.S. ಶುಭ.B.Y. | |
| 2 | 2020-21 | ಜ್ಞಾನೇಶ್.H.M. ಸಿಂಚನ. ಪ್ರೇಮ.H.N. ಐಶ್ವರ್ಯ.H.K. ರುಚಿತ. ಮಾಧುರಿ.H.L. ಪೂರ್ಣಿಮಾ.H.P. ಜಯಲಕ್ಷ್ಮಿ B.M. ಕೋಮಲೇಶ್.H.K. ಸುರೇಶ್.H.V. ರಮ್ಯ.H.N | ಹಾಸನ ಜಿಲ್ಲೆಗೆ ಪ್ರಥಮ |
| 3 | 2021-22 | ದಿಗಂತ್.H.M. ಮಾನಸ.H.R. ಲೋಹಿತ್.B.S. ವರುಣಿ.H.P. ವೇಣುಗೋಪಾಲ್.H.D. ಹೇಮಲತ.H.C. ಜೀವನ್.B.J. ಅನನ್ಯ.C.G. | ಬೇಲೂರು ತಾಲ್ಲೂಕಿಗೆ ಪ್ರಥಮ |
| 4 | 2022-23 | ಯೋಗಾನಂದ.H.D. ರೂಪ.N.E. ಕವನ.H.J. ಸಂಜಯ್.H.G. ವಿನಯ್ ಗೌಡ.H.M. ಚೇತನ್.H.R. ಯಶಸ್ವಿನಿ.H.L. ಯಶಸ್ವಿನಿ.P. ದಿವ್ಯ.H.V. ಜ್ಞಾನೇಶ್ವರಿ.H.M ಭರತ್ ಕುಮಾರ್.B.L. ಯಶ್ವಂತ್.H.R. ಸಹನ.H.G. ಲಾವಣ್ಯ.H.C. ಐಶ್ವರ್ಯ.H.E | ಹಾಸನ ಜಿಲ್ಲೆಗೆ ದ್ವಿತಿಯ |
| 4 | 2023-24 | ದೀಪ್ತಿ.H.T. ನಿಧಿ.H.N. ಸಂದೇಶ್.B.M. ಸುಪ್ರೀತ್.H.S. ಭುವನ್.H.V. ಪ್ರೀತಮ್.B.M | ಬೇಲೂರು ತಾಲ್ಲೂಕಿಗೆ ಪ್ರಥಮ |

| ಕ್ರ.ಸಂ | ವರ್ಷ | ಆಯ್ಕೆಯಾದವಿದ್ಯಾರ್ಥಿಗಳಸಂಖ್ಯೆ | ಸ್ಥಾನ |
|---|---|---|---|
| | | | |

| | | | |
|---|---|---|---|
| 1 | 2019–20 | 02 | ---- |
| 2 | 2020–21 | 11 | ಹಾಸನಜಿಲ್ಲೆಗೆಪ್ರಥಮ |
| 3 | 2021–22 | 08 | ಬೇಲೂರುತಾಲ್ಲೂಕಿಗೆಪ್ರಥಮ |
| 4 | 2022–23 | 16 | ಬೇಲೂರುತಾಲ್ಲೂಕಿಗೆಪ್ರಥಮ |
| 5 | 2023–24 | 06 | ಬೇಲೂರುತಾಲ್ಲೂಕಿಗೆಪ್ರಥಮ |

## ಕ್ರೀಡಾಕ್ಷೇತ್ರದಲ್ಲಿಸಾಧನೆ

**ಕ್ರೀಡಾಮತ್ತುಸಾಂಸ್ಕೃತಿಕಕ್ಷೇತ್ರದಲ್ಲಿಈಶಾಲೆಯಮಕ್ಕಳನಿರ್ವಹಣೆಗಮನಾರ್ಹವಾದದ್ದು.ಕಳೆದಎರಡುವರ್ಷಗಳಲ್ಲಿವಲಯಮತ್ತುತಾಲೂಕುಮಟ್ಟದಕ್ರೀಡಾಸ್ಪರ್ಧೆಗಳಲ್ಲಿದೈಹಿಕಶಿಕ್ಷಕರಅಲಭ್ಯತೆಯನಡುವೆಯೂಪ್ರತಿಬಾರಿ 25**
**ಕ್ಕೂಹೆಚ್ಚುಸ್ಪರ್ಧೆಗಳಲ್ಲಿಪದಕಗಳನ್ನುಗೆಲ್ಲುವಮೂಲಕಗಮನಾರ್ಹಸಾಧನೆಯನ್ನುಈಶಾಲೆಯವಿ**




**ದ್ಯಾರ್ಥಿಗಳುಮಾಡಿದ್ದಾರೆ**







# ಶಾಲಾಪ್ರವಾಸ

ಪ್ರತಿವರ್ಷಶಾಲಾಪ್ರವಾಸವನ್ನುವಿಶೇಷರೀತಿಯಲ್ಲಿಅಯೋಜಿಸಲಾಗುತ್ತದೆ.ಅದರಲ್ಲೂ ಈ ಬಾರಿಎಂದರೆ 2024-250ನೇ ಸಾಲಿನಶಾಲಾಪ್ರವಾಸಶಾಲೆಯಇತಿಹಾಸದಲ್ಲಿಯೇಸದಾಕಾಲಉಳಿಯುವಂತದ್ದು.ಏಕೆಂದರೆಪ್ರಸಕತವರ್ಷದೆಹಲಿಸೇರಿದಂತೆಉತ್ತರಭಾರತದಪ್ರವಾಸವನ್ನುಯಶಸ್ವಿಯಾಗಿಕೈಗೊಳ್ಳಲಾಯಿತು.ಅಕ್ಟೋಬರ್ 16 ರಿಂದ 26 ರ ವರೆಗೆ 11 ದಿನಗಳಕಾಲದೆಹಲಿ,ಅಮೃತಸರ,ವಾಘಾಗಡಿ,ಆಗ್ರಾ,ಮಥುರಾ,ಫತೇಪುರಸಿಕ್ರಿಸೇರಿದಂತೆಹಲವುಪಪ್ರೇಕ್ಷಣೀಯಸ್ಥಳಗಳನ್ನುಮಕ್ಕಳುವೀಕ್ಷಿಸಿಜೀವನಪೂರ್ತಿನೆನಪಿಡುವಪ್ರವಾಸದಅನುಭವಗಳನ್ನುಪಡೆದುಕೊಂಡರು.ಈಮೂಲಕದೆಹಲಿಪ್ರವಾಸವನ್ನುಕೈಗೊಂಡಜಿಲ್ಲೆಯಮೊದಲಸರ್ಕಾರಿಪ್ರೌಢಶಾಲೆಎಂಬಶಾಶ್ವತದಾಖಲೆಯನ್ನುಶಾಲೆಯುತನ್ನಹೆಸರಿಗೆಬರೆದುಕೊಂಡಿತು








ಸರ್ಕಾರಿ ಪ್ರೌಢಶಾಲೆ, ಹನುಮಿಡಿ.
ಬೇಲೂರು ತಾ|| ಹಾಸನ ಜಿ.
GOVERNMENT OF KARANATAKA
DEPARTMENT OF SCHOOL EDUCATION & LITERACY
GOVT HIGH SCHOOL, HANUMIDI
BELUR (T), HASSAN (D)
SCHOOL TOUR - 2024
(DELHI, AGRA,MATHURA,AMRITHSAR,VAGHA BORDER)
16-10-24 TO 25-10-2024





## <u>ಶಾಲಾಸಂಸತ್ತು್ಚನಾವಣೆ</u>








ಮತದಾನ

ಶಾಲಾಸಂಸತ್ತ್ಸದಸ್ಯರು

# ಕ್ಲಸ್ಟರ್ಮಟ್ಟದಕಲಿಕಾಹಬ್ಬ







# ಗ್ರಾಮ ಹಬ್ಬವಾದ ಹಲ್ಮಿಡಿ ಗ್ರಾಮದ ಪ್ರೌಢಶಾಲಾ 'ಕಲಿಕಾ ಹಬ್ಬ'

**ಬೇಲೂರು** : ದೇಶದ ಅಭ್ಯುದಯಕ್ಕಾಗಿ ಅತ್ಯಗತ್ಯವಿರುವ ಶೈಕ್ಷಣಿಕ ಪ್ರಗತಿಗೆ ಸರಕಾರಗಳು ಒಂದಲ್ಲ ಒಂದು ಯೋಜನೆಯನ್ನು ಜಾರಿಗೊಳಿಸುವುದು ಸಹಜವಾದರೂ, ಅದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು ಅಷ್ಟೇ ಪ್ರಮುಖವಾದ ಅಂಶ.



'ನೀ ಹೊಡೆದಂಗೆ ಮಾಡು, ನಾ ಅತ್ತಂಗೆ ಮಾಡ್ತೀನಿ' ಎಂಬ ಧೋರಣೆಯೊಂದಿಗೆ ಸರಕಾರ ಹತ್ತು ಹಲವು ಯೋಜನೆಗಳು ನೆಲಕಚ್ಚುವುದೂ ಉಂಟು. ಆದರೆ ಇದಕ್ಕೆ ಹೊರತಾಗಿ ತಮ್ಮದೇ ಇತಿಮಿತಿಯಲ್ಲಿ ಶಿಕ್ಷಣ ಪ್ರಗತಿಯ ಭಾಗವಾಗಿ ಸರಕಾರ ಜಾರಿಗೆ ತಂದಿರುವ ಪ್ರಾಥಮಿಕ ಹಂತದ ಶಾಲಾ ಮಕ್ಕಳ 'ಕಲಿಕಾ ಹಬ್ಬ' ತಾಲ್ಲೂಕಿನ ಕನ್ನಡದ ಪ್ರಥಮ ಶಿಲಾ ಶಾಸನ ನೀಡಿದ ಹಲ್ಮಿಡಿ ಗ್ರಾಮದಲ್ಲಿ ಗ್ರಾಮೀಣ ಹಬ್ಬದ ರೂಪದಲ್ಲಿ ಅನುಷ್ಠಾನಗೊಂಡಿರುವುದು ಹೆಮ್ಮೆ ತರುವಂತಾದ್ದು.

ಹಲ್ಮಿಡಿಯ ಸರಕಾರಿ ಪ್ರೌಢಶಾಲೆಯ ಆವರಣದಲ್ಲಿ ಕರಗಡ ಗ್ರಾಮದ ಕ್ಲಸ್ಟರ್ ಮಟ್ಟದ 'ಕಲಿಕಾ ಹಬ್ಬ'ವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಗ್ರಾಮದ ಪ್ರಮುಖ ರಸ್ತೆಗಳನ್ನು ತಳಿರು ತೋರಣಗಳಿಂದ ಶೃಂಗರಿಸಿದ್ದಲ್ಲದೆ, ಮೆರವಣಿಗೆಯ ಮೂಲಕ ಅತಿಥಿ ಗಣ್ಯರನ್ನು ಬರಮಾಡಿಕೊಳ್ಳಲಾಯಿತು. ಮೆರವಣಿಗೆಯಲ್ಲಿ ಕುಂಭ ಹೊತ್ತ ವಿದ್ಯಾರ್ಥಿನಿಯರು, ಸಿಂಗರಿಸಿದ ಎತ್ತಿನಗಾಡಿಗಳು, ವಿವಿಧ ವೇಷಭೂಷಣ ಧರಿಸಿದ ಮಕ್ಕಳು, ಸಿಂಗರಿಸಿದ ಹಳ್ಳಿಕಾರ್ ರಾಸುಗಳು ವಾಧ್ಯದೊಂದಿಗಿನ ಮೆರವಣಿಗೆಯಲ್ಲಿ ಕಳೆಗಟ್ಟಿದವು. ಶಾಲಾ ಆವರಣದಲ್ಲಿ ಜಾನಪದ ಶೈಲಿಯ ಸಾಮಾಗ್ರಿಗಳ ಬಳಸಿ ಶೃಂಗರಿಸಲಾಗಿತ್ತು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ನಾರಾಯಣಪುರ ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ ಇಮ್ರಾನ್‌ಪಾಷ ದೀಪ ಬೆಳಗಿಸುವುದರ ಮೂಲಕ ಚಾಲನ ನೀಡಿ ಮಾತನಾಡಿ, ಕೋವಿಡ್ ಕಾರಣದಿಂದ ಕಲಿಕಾ ಹಬ್ಬ ಆಚರಣೆಗೆ ಅಡ್ಡಿಯಾಗಿತ್ತು. ಇದೀಗ ಪುನಃ ಆರಂಭಗೊಂಡು ಕಲಿಕೆಗೆ ಅನುಕೂಲವಾಗಿದೆ ಎಂದರು. ನಿವೃತ್ತ ಮುಖ್ಯಶಿಕ್ಷಕ ಮಂಜುನಾಥರೆಡ್ಡಿ, ಸರಕಾರಿ ಕಾರ್ಯಕ್ರಮವನ್ನು ತಮ್ಮೂರಿನ ಹಬ್ಬವೆಂಬಂತೆ ಗ್ರಾಮಸ್ಥರು ಆಚರಿಸುತ್ತಿರುವುದು ಸಂತೋಷ ತಂದಿದ್ದು ಇದು ಇತರರಿಗೆ ಮಾದರಿ ಎಂದು ಹೇಳಿದರು. ಶಾಲಾ ಮುಖ್ಯಶಿಕ್ಷಕ ಕೆ.ಎಸ್.ನವೀನ್‌ಕುಮಾರ್, ಕಸಾಪ ಹೋಬಳಿ ಅಧ್ಯಕ್ಷ ಚನ್ನೇಗೌಡ, ಬಿಆರ್‌ಪಿ ಕುಮಾರ್, ಪ್ರಾ.ಶಾ.ಮು.ಶಿ.ರೇವಣ್ಣ, ಗ್ರಾ.ಪಂ.ಸದಸ್ಯರಾದ ಪರ್ವತೇಗೌಡ, ಗೋವಿಂದೇಗೌಡ, ಮೋಹನ್, ಈಶ್ವರ್ ಇತರರು ಪಾಲ್ಗೊಂಡಿದ್ದರು. ನಿರೂಪಣೆ ಪ್ರಶಾಂತ್, ಸೋಮೇಗೌಡ ಸ್ವಾಗತ, ಮಂಜುಳ ವಂದನಾ ಕಾರ್ಯಕ್ರಮ ನಡೆಸಿಕೊಟ್ಟರು.

# :ಶಿಕ್ಷಕರಕಲ್ಯಾಣನಿಧಿಅನುದಾನಹಾಗೂಸ್ಟೂಡೆಂಟಪೋಲಿಸ್ಕೆಡೆಟ್ಘಟಕಸ್ಥಾಪನೆ:

**ಶಾಲೆಯಶೈಕ್ಷಣಿಕಪ್ರಗತಿಯನ್ನುಗಮನಿಸಿ 23-24 ನೇಸಾಲಿನಲ್ಲಿSWF ವತಿಯಿಂದಮಾದರಿಶಾಲಾಭೇಟಿಗೆಒಂದುದಿನದಪ್ರವಾಸತೆರಳಲು 15000 ರೂಗಳಅನುದಾನವನ್ನುನೀಡಲಾಗಿತ್ತು .ಅದರಂತೆಒಂದುದಿನದಪ್ರವಾಸವನ್ನುಯಶಸ್ವಿಯಾಗಿಸಂಘಟಿಸಲಾಯಿತು.**


**ಅದೇರೀತಿ 2023-24 ನೇಸಾಲಿನಲ್ಲಿಹಾಸನಜಿಲ್ಲಾಪೋಲಿಸ್ಇಲಾಖೆಯಿಂದಆಯ್ದಶಾಲೆಗಳಲ್ಲಿಸ್ಥಾಪಿಸಲಾಗುವಸ್ಟೂಡೆಂಟ್ಪೋಲಿಸ್ಕೆಡೆಟ್ಘಟಕವನ್ನುನಮ್ಮಶಾಲೆಯಲ್ಲಿಸ್ಥಾಪಿಸಿ 50000 ಸಾವಿರರೂಗಳಅನುದಾನವನ್ನು ಒದಗಿಸಲಾಗಿತ್ತು.ಈಅನುದಾನದಲ್ಲಿಹೆಣ್ಣುಮಕ್ಕಳಿಗರಸ್ವರಕ್ಷಣಾತರಬೇತಿ,ಪೋಲಿಸ್ಠಾಣೆಭೇಟಿ, ಕಾನೂನುಅರಿವುಉಪನ್ಯಾಸ,ಕ್ಷೇತ್ರಭೇಟಿಯಂತಹಹಲವುಕಾರ್ಯಕ್ರಮಗಳನ್ನುಆಯೋಜಿಸಲಾಗಿತ್ತು**






# <u>ಶಾಲಾ ಕ್ಯಾಲೆಂಡರ್</u>

**<u>ಶಾಲೆಯಲ್ಲಿ ಪ್ರತಿ ವರ್ಷ ದಾನಿಗಳ ಸಹಕಾರದೊಂದಿಗೆ ಶಾಲಾ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಲಾಗುತ್ತದೆ.ಶಾಲೆಯ ವಿಶೇಷತೆಗಳನ್ನು ಈ ಕ್ಯಾಲೆಂಡರ್ ನಲ್ಲಿ ಪ್ರದರ್ಶಿಸಲಾಗುತ್ತದೆ.</u>**




# <u>:ಸಾಂಪ್ರದಾಯಿಕಉಡುಗೆದಿನ:</u>




**ಪ್ರತಿವರ್ಷದಮೊದಲದಿನವಾದಜನವರಿ 1 ರಂದುಸಾಂಪ್ರದಾಯಿಕುಡುಗೆದಿನವಾಗಿಆಚರಿಸುವಮೂಲಕಮಕ್ಕಳಲ್ಲಿನಮ್ಮಸಾಂಸ್ಕೃತಿಕಹಿರಿಮೆಯನ್ನುಪರಿಚಯಿಸಲಾಗುತ್ತದೆ.ಅದೇದಿನದಂದುಪಾರಂಪರಿಕವಸ್ತುಪ್ರದರ್ಶನಏರ್ಪಡಿಸಿಈಗಬಳಕೆಯಲ್ಲಿಲ್ಲದಹಿಂದಿನಕಾಲದವಸ್ತುಗಳಪ್ರದರ್ಶನಹಮ್ಮಿಕೊಳ್ಳಲಾಗುತ್ತದೆ.**

## :ದೇಸಿಆಹಾರಮೇಳ:

**ಪ್ರತಿವರ್ಷದೇಸಿಆಹಾರಮೇಳವನ್ನುಆಯೋಜಿಸಿಮಕ್ಕಳೇಆಹಾರತಯಾರಿಸಿವ್ಯಾಪಾರನಡೆಸುವಂತೆ ಅಣಿಗೊಲಿಸಲಾಗುತ್ತದೆ.ಈ ಸ್ಪರ್ಧೆಯಲ್ಲಿ ಇಡೀಗ್ರಾಮದಜನರುಪಾಲ್ಗೊಂಡುಹಬ್ಬದರೀತಿಯಲ್ಲಿ ಆಚರಣೆಮಾಡುತ್ತಾರೆ.**



## “ಸೊಬಗಿನಶಾಲೆಗಳು” ಮಾಲಿಕೆಯಲ್ಲಿನಮ್ಮಶಾಲೆ

ಹಾಸನಆಕಾಶವಾಣಿಕೇಂದ್ರದಿಂದಪ್ರಸಾರವಾಗುವಸೊಬಗಿನಶಾಲೆಗಳುಮಾಲಿಕೆಯಲ್ಲಿನಮ್ಮಶಾಲೆಯಬಗ್ಗೆವಿಸತಾರವಾದಪರಿಚಯಕಾರ್ಯಕ್ರಮಮೂಡಿಬಂದಿತು ಈ ಕಾರ್ಯಕ್ರಮದಲ್ಲಿಎಸ್ಡಿಎಂಸಿಅಧ್ಯಕ್ಷರುಹಾಗೂಮುಖ್ಯಶಿಕ್ಷಕರುಶಾಲೆಯವಿಶೇಷಗಳುಹಾಗೂಸಾಧನೆಗಳಬಗ್ಗೆಮಾಹಿತಿನೀಡಿದರು

| | | | |
|---|---|---|---|
| 7:15 AM | 7:30 AM | PBS | ಕಾರ್ಯಕ್ರಮ : ಸೊಬಗಿನ ಶಾಲೆ -<br><br>ಸರ್ಕಾರಿ ಪ್ರೌಢಶಾಲೆ , ಹನುಮಿಡಿ , ಬೇಲೂರು ತಾಲ್ಲೂಕು - ಈ ಶಾಲೆಯ ಕುರಿತಾಗಿ ವಿಶೇಷ ಮಾಹಿತಿ.<br><br>ಪ್ರಸ್ತುತಿ - ಲೀಲಾವತಿ ಕೆ. ಎನ್. |

# **:ಶಾಲಾಪೌಷ್ಟಿಕವನ:**








---

**<u>ಪೋಷಕರುಮತ್ತುತಾಯಂದಿರಸಭೆ</u>**

# GHS HANUMIDI
# Parents meet 19/7/23







# :ಪಾಕ್ಷಿಕರಸಪ್ರಶ್ನೆಕಾರ್ಯಕ್ರಮ:

**SSLC ಪರೀಕ್ಷೆಯಲ್ಲಿಅತಿಹೆಚ್ಚುಅಂಕಗಳನ್ನುಗಳಿಸುವದೃಷ್ಟಿಯಿಂದಪ್ರತಿ 15 ದಿನಗಳಿಗೊಮ್ಮೆರಸಪ್ರಶ್ನೆಸ್ಪರ್ಧೆನಡೆಸಿಬಹುಮಾನವಿತರಿಸಲಾಗುತ್ತಿದೆ.**




ಸರ್ಕಾರಿ ಪ್ರೌಢಶಾಲೆ ಹನುಮಿಡಿ, ಬೇಲೂರು ತಾ